# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿದಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ: 21-05-2021 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು**

1. ಶ್ರೀ ನಾಗಪ್ಪ ಕಮತಿ (ನೋಡಲ್ ಅಧಿಕಾರಿ)
2. ಶ್ರೀ ಎಸ್. ರಾಜನ್ (ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು)
3. ಶ್ರೀ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
4. ಶ್ರೀಮತಿ ಶ್ರೀಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು,
5. ಶ್ರೀ ಶ್ರೀನಿವಾಸ್, ಕಂದಾಯ ನಿರೀಕ್ಷಕರು,
6. ಶ್ರೀ ಜೋಶ್ವಾ, ಕರ ವಸೂಲಿಗಾರರು,
7. ಶ್ರೀ ಮುರಳೀಧರ, ಸ್ಥಳೀಯರು,
8. ಸ್ವಯಂ ಸೇವಕರು, (ಕೋವಿಡ್-19) ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ,

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ಸಭೆಯಲ್ಲಿ ಮಂಡಿಸಲಾದ ಉದ್ದೇಶಗಳು**

1. ಕಮ್ಮನಹಳ್ಳಿ, ವಾರ್ಡ್ ನಂ.28 ರಲ್ಲಿ ಕೋವಿಡ್-19ರ ರೋಗಿಗಳಿಗಾಗಿ ಕೋವಿಡ್ ವಾರ್ ರೂಂ ಅನ್ನು ಸ್ಥಾಪಿಸುವುದು.
2. ಮೇಲೆ ತಿಳಿಸಿರುವ ಉದ್ದೇಶಕ್ಕಾಗಿ ಕೋವಿಡ್ ಕೇರ್ ಸೆಂಟರ್ ಅನ್ನು ಸ್ಥಾಪಿಸುವುದು.
3. ಈ ಎರಡು ಉದ್ದೇಶಗಳಿಗಾಗಿ ಸ್ಥಳ ಪರೀಕ್ಷೆ ನಡೆಸಿ ಗೊತ್ತುಪಡಿಸುವುದು.
4. ಮೇಲಿನ ಉದ್ದೇಶಕ್ಕಾಗಿ 40 ರಿಂದ 50 ಜನ ಸ್ವಯಂ ಸೇವಕರು, ಡಾಟಾ ಎಂಟ್ರಿ ಮಾಡುವವರು, ದಾದಿಯರು ಮತ್ತು ಶುಶ್ರೂರಕರನ್ನು ನೇಮಿಸುವುದು.

**ಸಭೆಯ ನಡವಳಿಗಳು**

1) **ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ** ರವರು ಮಾತನಾಡಿ, ಕಮ್ಮನಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಒಂದು ಕೋವಿಡ್ ವ್ಯಾಕ್ಸಿನೇಷನ್ ಸೆಂಟರ್ ಕೋವಿಡ್ ತಪಾಸಣಾ ಕೇಂದ್ರ ಹಾಗೂ ಟ್ರೈಯೇಜ್ ಸೆಂಟರ್‌ನ್ನು ಸ್ಥಾಪಿಸಿ, ನಿರ್ವಹಿಸಲು ಸಭೆಗೆ ತಿಳಿಸಿದರು.
2) ವಾರ್ಡ್ ಮಟ್ಟದ ಸಾರ್ವಜನಿಕರಲ್ಲಿ ಕೋವಿಂಡ್ ಸೋಂಕು ನಿಯಂತ್ರಣ ಹಾಗೂ ಜನ ಜಾಗೃತಿ ಮೂಡಿಸಲು ಸ್ವಯಂ ಸೇವಕರನ್ನು ಆಯ್ಕೆ ಮಾಡಿ, ಸ್ವಯಂ ಸೇವಕರಿಗೆ ಗುರುತಿನ ಚೀಟಿಯನ್ನು ವಿತರಿಸಲು ಕ್ರಮ ವಹಿಸಲು ವಾರ್ಡ್ ಕಮಿಟಿ ಕಾರ್ಯದರ್ಶಿ ರವರಿಗೆ ತಿಳಿಸಿದರು.

3) **ಶ್ರೀ ಹನುಮಂತಪ್ಪ, ಹಿರಿಯ ಆರೋಗ್ಯ ನಿರಕ್ಷಕರು ರವರು ಮಾತನಾಡಿ,**

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚಾಗುತ್ತಿರುವ ಸೋಂಕನ್ನು ತಡೆಗಟ್ಟಲು ದಿನಾಂಕ: 07-05-2021 ರಂದು ನಡೆದ ಸಭೆಯಲ್ಲಿ ಪ್ರತಿ ವಾರ್ಡ್‌ನಲ್ಲಿ ಕೋವಿಡ್ ಕೇರ್ ಸೆಂಟರ್ ಹಾಗೂ Deter Committee ಸ್ಥಾಪಿಸಲು ಹಾಗೂ ಸದರಿ ಕಮಿಟಿಗೆ ಶ್ರೀ ನಾಗಪ್ಪ ರವರು ಅಧ್ಯಕ್ಷರಾಗಿರುತ್ತಾರೆಂದು ಸಭೆಗೆ ತಿಳಿಸಿದರು.
- ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ನಾಗರೀಕರಿಗೆ ಅನುಕೂಲವಾಗುವಂತೆ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಒಂದರಂತೆ ಒಂದು ಕೋವಿಡ್ ವಾರ್ ರೂಮ್ ಸ್ಥಾಪಿಸಿ ನಿರ್ವಹಿಸಲಾಗುತ್ತಿದ್ದು, ಅದರಂತೆ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜ್ಯೋತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಕೋವಿಡ್ ವಾರ್ ರೂಮ್ ತೆರೆಯಲಾಗಿದ್ದು, ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಲು ಸಭೆಗೆ ತಿಳಿಸಿದರು.
- ಕಮ್ಮನಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಒಂದು ಕೋವಿಡ್ ತಪಾಸಣಾ ಕೇಂದ್ರ ಹಾಗೂ ವ್ಯಾಕ್ಸಿನೇಷನ್ ಸೆಂಟರ್ ತೆರೆಯಲು ಹಾಗೂ ಸದರಿ ಸೆಂಟರ್‌ನ ಉಸ್ತುವಾರಿಯನ್ನು ಡಾ॥ ಸಾಲೋಮನ್ ರವರಿಗೆ ವಹಿಸಿಕೊಡಲಾಗುವುದು ಎಂದು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ 45 ವರ್ಷ ವಯೋಮಾನದ ಎಲ್ಲಾ ನಾಗರೀಕರು ಕಡ್ಡಾಯವಾಗಿ ಲಸಿಕೆಯನ್ನು ಹಾಕಿಕೊಳ್ಳಲು ಜನ ಜಾಗೃತಿ ಮೂಢಿಸಲು ಹಾಗೂ ವ್ಯಾಕ್ಸಿನೇಷನ್ ಪಡೆದ ವ್ಯಕ್ತಿಯು ಸುರಕ್ಷಿತವಾಗಿರುವುದಾಗಿ ಸಭೆಗೆ ತಿಳಿಸಿದರು.
- ಕೋವಿಡ್ ಪರೀಕ್ಷೆಗೆ ಒಳಪಟ್ಟ ನಾಗರೀಕರಿಗೆ ಸೋಂಕು ದೃಢಪಟ್ಟ ತಕ್ಷಣ ಬಿ.ಯು ನಂಬರ್ ಜನರೇಟ್ ಆಗುತ್ತಿದ್ದು, ನಂಬರ್ ಬಂದ ತಕ್ಷಣ ಕಾಲ್ ಸೆಂಟರ್‌ಗೆ ಕರೆ ಮಾಡಿ, ಸುರಕ್ಷತಾ ಕ್ರಮವನ್ನು ಕೈಗೊಳ್ಳಲು ತಿಳಿಸಿದರು.

4) **ಡಾ॥ ಸಾಲೋಮನ್, ವೈದ್ಯಾಧಿಕಾರಿಗಳು, ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ ರವರು ಮಾತನಾಡಿ,**

- ಪ್ರಸ್ತುತ ಕೋವಿಡ್ ಸೋಂಕು ಯತೇಚ್ಛವಾಗಿ ಹರಡುತ್ತಿದ್ದು, ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಹಾಗೂ ಅನಾವಶ್ಯಕವಾಗಿ ಹೊರಗಡೆ ತಿರುಗಾಡದೇ ಇರುವುದರಿಂದ ಸೋಂಕನ್ನು ಹತೋಟಿಗೆ ತರಲು ಸಾಧ್ಯವಾಗುತ್ತಿದೆ ಎಂದು ಸಭೆಗೆ ತಿಳಿಸಿದರು.
- ಸೋಂಕಿನ ಪ್ರಮಾಣ ಹೆಚ್ಚಾಗಿರುವುದರಿಂದ ಪ್ರತಿ ಸೋಂಕಿತರಿಗೆ ಬೆಡ್ ಹಾಗೂ ಇತರೆ ಆರೋಗ್ಯ ಸೇವೆಯನ್ನು ಕಲ್ಪಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದುದರಿಂದ ಸಾರ್ವಜನಿಕರು ಪ್ರಾಥಮಿಕ ಹಂತದಲ್ಲಿ ಲಕ್ಷಣ ಕಂಡು ಬಂದ ತಕ್ಷಣ ಕೋವಿಡ್ ಪರೀಕ್ಷೆಯನ್ನು ಮಾಡಿಸಿ, ಆಗಿಂದ್ದಾಗ್ಗೆ ಸೂಕ್ತ ಚಿಕಿತ್ಸೆ ಪಡೆಯುವುದರಿಂದ ಸೋಂಕಿನ ವ್ಯಕ್ತಿ ಆಸ್ಪತ್ರೆಗಳಿಗೆ ದಾಖಲಿಸುವ ಪ್ರಮಾಣವನ್ನು ಕಡಿಮೆ ಮಾಡಬಹುದು ಎಂದು ಸಭೆಗೆ ತಿಳಿಸಿದರು.
- ಸೋಂಕು ದೃಢಪಟ್ಟ ವ್ಯಕ್ತಿಯು ಯಾವುದೇ ಭಯ ಪಡೆದೇ ಸೂಕ್ತ ಚಿಕಿತ್ಸೆ ಪಡೆದಲ್ಲಿ ಸೋಂಕನ್ನು ಕಡಿಮೆ ಮಾಡಬಹುದಾಗಿರುತ್ತದೆ. ಹಾಗೂ ಸೋಂಕು ಬಂದ ವ್ಯಕ್ತಿಯು ಯಾವುದೇ ಭಯ ಪಡದೇ, ವೈದ್ಯರು ಸೂಚಿಸುವ ಮಾತ್ರೆ ಹಾಗೂ ಇತರೆ ಸಲಹೆಗಳನ್ನು ಕಟ್ಟು ನಿಟ್ಟಾಗಿ

ಪಾಲಿಸಿದರು ಸೋಂಕನ್ನು ತಗ್ಗಿಸಬಹುದಾಗಿರುತ್ತದೆ ಎಂದು ಈ ಬಗ್ಗೆ ಸಾರ್ವಜನಿಕರಿಗೆ ಜನ ಜಾಗೃತಿ ಮೂಡಿಸುವುದು ಅತ್ಯಾವಶ್ಯಕವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

5) <u>ಶ್ರೀ ಮುರಳೀಧರ್, ಸ್ಥಳೀಯರು ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ ರವರು ಮಾತನಾಡಿ,</u>

- ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕನ್ನು ನಿಯಂತ್ರಿಸಲು ಹಾಗೂ ಜನರಲ್ಲಿ ಜಾಗೃತಿ ಮೂಡಿಸಲು ಕಮಿಟಿ ಮಾಡಿರುವುದು ಸ್ವಾಗತಾರ್ಹವಾಗಿರುವುದಾಗಿ ಸಭೆಗೆ ತಿಳಿಸಿದರು.
- ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ತರಕಾರಿ ಹಾಗೂ ಹಣ್ಣಿನ ವ್ಯಾಪಾರಸ್ಥರು ಬೀದಿ ಬದಿ ವ್ಯಾಪಾರ ಮಾಡುತ್ತಿದ್ದು, ವಾರ್ಡ್‌ನ ವ್ಯಾಪಾರಸ್ಥರು ಅಲ್ಲದೇ ಸುತ್ತ ಮುತ್ತಲ ಪ್ರದೇಶದ ಫ್ರೇಜರ್ ಟೌನ್, ಟ್ಯಾನರಿ ರಸ್ತೆ ಮತ್ತು ಇತರೆ ಪ್ರದೇಶದಿಂದ ಬರುವ ವ್ಯಾಪಾರಸ್ಥರನ್ನು ತಡೆಗಟ್ಟಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ಕಮ್ಮನಹಳ್ಳಿ ವ್ಯಾಪ್ತಿಯಲ್ಲಿ ಹೊಸದಾಗಿ ವ್ಯಾಕ್ಸಿನ್ ಸೆಂಟರ್ ತೆರೆಯಲು ಹಾಗೂ ಲಸಿಕೆ ಹಾಕಿಸಿಕೊಳ್ಳಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸಭೆಗೆ ತಿಳಿಸಿದರು.
- ಕಮ್ಮನಹಳ್ಳಿ ವ್ಯಾಪ್ತಿಯಲ್ಲಿ ಸೋಂಕಿತ ವ್ಯಕ್ತಿಗಳಿಗೆ ನೀಡುವ ಚಿಕಿತ್ಸೆ ಹಾಗೂ ಸೋಂಕಿತರ ಆರೋಗ್ಯದ ಬಗ್ಗೆ ನಿಗಾ ವಹಿಸಲು ಕ್ರಮ ವಹಿಸಲು ತಿಳಿಸಿದರು.
- ಸೋಂಕಿತ ಪ್ರಕರಣಗಳು ಹೆಚ್ಚಾಗಿರುವ ಪ್ರದೇಶದಲ್ಲಿ ಕಡ್ಡಾಯವಾಗಿ ಸೋಡಿಯಂ ಹೈಪೋಕ್ಲೋರೈಡ್ ದ್ರಾವಣವನ್ನು ಸಿಂಪಡಿಸಿ, ಸದರಿ ಪ್ರದೇಶವನ್ನು ಸ್ಯಾನಿಟೈಸೇಷನ್ ಮಾಡಲು ಜಾಗೃತಿ ಮೂಡಿಸಲು ಸಭೆಗೆ ತಿಳಿಸಿದರು.
- ಕಮ್ಮನಹಳ್ಳಿ ಮುಖ್ಯರಸ್ತೆಯ ಇಕ್ಕೆಲಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಹಣ್ಣು ಹಾಗೂ ತರಕಾರಿಗಳನ್ನು ಮಾರಾಟ ಮಾಡುತ್ತಿದ್ದು, ಇದರಿಂದ ಸಾರ್ವಜನಿಕರು ಸಾಮಾಜಿಕ ಅಂತರ ಕಾಯ್ದುಕೊಳ್ಳಲದೇ ಇರುವುದರಿಂದ ಸೋಂಕು ಹೆಚ್ಚಾಗುವುದಾಗಿ ಹಾಗೂ ಈ ಬಗ್ಗೆ ಪ್ರತಿ ವಾರದಲ್ಲಿ ಎರಡು ಬಾರಿ ಪಾದಾಚಾರಿ ಮಾರ್ಗದ ಒತ್ತುವರಿಯನ್ನು ತೆರವು ಕಾರ್ಯಾಚರಣೆ ಮಾಡಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

6) <u>ಡಾ॥ ಸುನಿತಾ, ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಲಯ ರವರು ಮಾತನಾಡಿ,</u>

- ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಬೀದಿ ಬದಿ ತರಕಾರಿ ಹಾಗೂ ಹಣ್ಣಿನ ಅಂಗಡಿಗಳನ್ನು ಇಟ್ಟು ವ್ಯಾಪಾರ ವಹಿವಾಟು ನಡೆಸುತ್ತಿರುವುದರಿಂದ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳದೇ ಇರುವುದರಿಂದ ಸೋಂಕು ಹೆಚ್ಚಾಗುತ್ತಿದ್ದು, ಸದರಿ ಪ್ರದೇಶದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ ವ್ಯಾಪಾರಿಗಳನ್ನು ಸದರಿ ಸ್ಥಳದಿಂದ ಸ್ಥಳಾಂತರ ಮಾಡಿ, ಯಾವುದಾದರೂ ಮೈದಾನದಲ್ಲಿ ಅನುಕೂಲ ಕಲ್ಪಿಸಿಕೊಡಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ಕೋವಿಡ್ 2ನೇ ಅಲೆಯಲ್ಲಿ ಸೋಂಕು ಅತೀ ವೇಗವಾಗಿ ಹರಡುತ್ತಿದ್ದು, ಈ ಸಮಯದಲ್ಲಿ ಮನೆಯ ಯಾವುದಾದರೂ ಒಬ್ಬ ವ್ಯಕ್ತಿಗೆ ಸೋಂಕು ದೃಢಪಟ್ಟಲ್ಲಿ ಮನೆಯಲ್ಲಿ ಇರುವ ಎಲ್ಲಾ ಸದಸ್ಯರಿಗೂ ಸೋಂಕು ಹರಡುತ್ತಿರುವುದು ಕಂಡು ಬರುತ್ತಿದೆ. ಇದರಿಂದ ಸೋಂಕು ದೃಢಪಟ್ಟ ಯಾವುದೇ ವ್ಯಕ್ತಿಯು ಜಾಗರೂಕರಾಗಿ ಮನೆಯ ಎಲ್ಲಾ ಸದಸ್ಯರಿಗೆ ಕೋವಿಡ್ ಪರೀಕ್ಷೆ ನಡೆಸಿ, ಸೋಂಕು ಕಂಡುಬಂದಲ್ಲಿ ಸೂಕ್ತ ಸಮಯದಲ್ಲಿ ಚಿಕಿತ್ಸೆ ಪಡೆಯಲು ಸಭೆಗೆ ತಿಳಿಸಿದರು.

- ಸೋಂಕು ದೃಢಪಟ್ಟ ಸಂದರ್ಭದಲ್ಲಿ ಸೋಂಕಿತರು ಕೂಡಲೇ ಹತ್ತಿರದ ಆಸ್ಪತ್ರೆಗೆ ದಾಖಲಾಗಿ ಸೂಕ್ತ ಚಿಕಿತ್ಸೆ ಪಡೆಯಲು ತಿಳಿಸಿದರು, ಒಂದು ವೇಳೆ ಸೋಂಕಿತರು ಆಸ್ಪತ್ರೆಗೆ ದಾಖಲಾಗದೇ ಇದ್ದು, ತದನಂತರ ಸೋಂಕು ಹೆಚ್ಚಾದಾಗ ಆಸ್ಪತ್ರೆಗೆ ದಾಖಲಾದಾಗ ಸೋಂಕಿತರಿಗೆ ಚಿಕಿತ್ಸೆ ನೀಡಲು ಕಷ್ಟಕರವಾಗುತ್ತದೆ ಈ ಸಮಯದಲ್ಲಿ ಯಾವುದೇ ಚಿಕಿತ್ಸೆಗೆ ಸ್ಪಂದಿಸದೇ ಪ್ರಾಣಾಪಾಯವಾಗುವ ಸಂಭವವಿರುತ್ತದೆ. ಆದುದರಿಂದ ಪ್ರಥಮ ಹಂತದ ಲಕ್ಷಣ ಕಂಡುಬಂದಲ್ಲಿ ಕೂಡಲೇ ಚಿಕಿತ್ಸೆ ಪಡೆಯಲು ಸಭೆಗೆ ತಿಳಿಸಿದರು.
- ಸಾರ್ವಜನಿಕರು ಕಡ್ಡಾಯವಾಗಿ ಕೋವಿಡ್ ಲಸಿಕೆಯನ್ನು ಪಡೆಯಲು ಮುಂದಾಗಬೇಕು, ಅದನ್ನು ಬಿಟ್ಟು ಸುಖಾ ಸುಮ್ಮನೆ ಸರ್ಕಾರವನ್ನು ದೂಷಿಸುವುದು ಹಾಗೂ ಲಸಿಕೆ ಬಗ್ಗೆ ಸುಖಾ ಸುಮ್ಮನೆ ಇಲ್ಲ ಸಲ್ಲದ ವದಂತಿಗಳಿಗೆ ಕಿವಿಗೊಡದೆ ಲಸಿಕೆಯನ್ನು ಹಾಕಿಸಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸಭೆಯಲ್ಲಿ ಹಾಜರಿದ್ದ ಸ್ವಯಂ ಸೇವಕರು ಹಾಗೂ ಕಮಟಿ ಸದಸ್ಯರಿಗೆ ಸೂಚಿಸಿದರು ಹಾಗೂ ಲಸಿಕೆ ಹಾಕಿಸದ ಹೊರತು ಸೋಂಕಿತರನ್ನು ಸುರಕ್ಷಿತವಾಗಿಡಲು ಸಾಧ್ಯವಾಗುವುದಿಲ್ಲವೆಂದು ಸಭೆಗೆ ತಿಳಿಸಿದರು.
- ಸಾರ್ವಜನಿಕರಿಗೆ ಲಸಿಕೆ ಹಾಕಿಸಲು ಉತ್ತೇಜನ ನೀಡಲು ಸಭೆಯಲ್ಲಿ ಹಾಜರಿದ್ದ ಸ್ವಯಂ ಸೇವಕರಿಗೆ ಆರೋಗ್ಯ ವೈದ್ಯಾಧಿಕಾರಿಗಳು ತಿಳಿಸಿದರು.
- ಸಾರ್ವಜನಿಕರು ಜ್ವರ ಅಥವಾ ಇನ್ನಾವುದೇ ಸೋಂಕಿನ ಲಕ್ಷಣಗಳು ಕಂಡು ಬಂದ ತಕ್ಷಣ ಆಸ್ಪತ್ರೆಗೆ ತೆರಳಿ ಹೆಚ್.ಆರ್.ಸಿ.ಟಿ ಪರೀಕ್ಷೆ ಅಥವಾ ಸ್ಕ್ಯಾನ್ ಮಾಡಿ ತಮ್ಮ ಆರೋಗ್ಯದ ಬಗ್ಗೆ ಎಚ್ಚರಿಕೆ ವಹಿಸಲು ಸಭೆಗೆ ತಿಳಿಸಿದರು.
- ಯಾವುದೇ ಸೋಂಕಿತ ವ್ಯಕ್ತಿಯು ಮನೆಯಲ್ಲಿ ಐಸೋಲೇಟ್ ಆಗಬೇಕು, ಒಂದು ವೇಳೆ ಮನೆಯಲ್ಲಿ ಒಂದೇ ಶೌಚಾಲಯ ಇದ್ದಲ್ಲಿ ಕೋವಿಡ್ ಕೇರ್ ಅಥವಾ ಹಾಸ್ಪಿಟಲ್ ಗೆ ದಾಖಲಾಗಿ ಚಿಕಿತ್ಸೆ ಪಡೆಯಲು ತಿಳಿಸಿದರು.
- ಸೋಂಕಿತ ವ್ಯಕ್ತಿಯು ತಮ್ಮ ಆಕ್ಸಿಜನ್ ಲೆವಲ್ ಕಡಿಮೆ ಆಗದಂತೆ ಮುತುವರ್ಜಿ ವಹಿಸಲು ಸೂಚಿಸಿದರು. ಹಾಗೂ ಆಕ್ಸಿಜನ್ 70 ಕ್ಕಿಂತ ಕೆಳಗೆ ಇದ್ದರೆ ಇದು ಅತೀ ವೇಗವಾಗಿ ಕಡಿಮೆ ಆಗಿ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದುದರಿಂದ ಈ ಬಗ್ಗೆ ಕಾಳಜಿ ವಹಿಸಲು ಸಭೆಗೆ ತಿಳಿಸಿದರು.

7) <u>ಶ್ರೀ ಪಾಂಡಿಯನ್, ಸ್ಥಳೀಯರು ರವರು ಮಾತನಾಡಿ,</u>

- ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ಕೋವಿಡ್ ಸೋಂಕಿನ ಪ್ರಕರಣಗಳು ಹೆಚ್ಚಾಗುತ್ತಿದ್ದು, ಈ ಬಗ್ಗೆ ಪೂರ್ವ ವಲಯದ ಅಧಿಕಾರಿ / ನೌಕರರುಗಳಿಗೆ ದೂರವಾಣಿ ಮಾಡಿದಾಗ ಸರಿಯಾದ ಸ್ಪಂದನೆ ನೀಡುತ್ತಿಲ್ಲವೆಂದು ಸಭೆಯಲ್ಲಿ ಪ್ರಸ್ತಾಪಿಸಿದರು, ಹಾಗೂ ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಜನದಟ್ಟನೆ ಹೆಚ್ಚಾಗುತ್ತಿರುವುದರಿಂದ ಸೋಂಕು ಹೆಚ್ಚಾಗುತ್ತಿರುವುದಾಗಿ ಇದನ್ನು ತಡೆಗಟ್ಟಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

8) **ಶ್ರೀ ಕೆಂಪರಾಜು, ಸ್ಥಳೀಯರು ರವರು ಮಾತನಾಡಿ,**

- ಸೋಂಕಿತರು ಚಿಕಿತ್ಸೆಗೆಂದು ಬಿಬಿಎಂಪಿ ಕೋಟಾದಡಿ ಆಸ್ಪತ್ರೆಗೆ ದಾಖಲಾದಾಗ ವೈದ್ಯರು ಸರಿಯಾಗಿ ಚಿಕಿತ್ಸೆ ನೀಡದೇ ಇರುವುದು ಕಂಡು ಬಂದಿದ್ದು, ಇದನ್ನು ಕೂಡಲೇ ಸರಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸಲು ಸಭೆಗೆ ತಿಳಿಸಿದರು.

9) **ಶ್ರೀ ವಿಜಯ್ ರಾಜ್ ಜೈನ್, ಸ್ಥಳೀಯರು ರವರು ಮಾತನಾಡಿ,**

- ಇತ್ತೀಚೆಗೆ ಕೋವಿಡ್ ಸೋಂಕಿತ ವ್ಯಕ್ತಿಯು ಗುಣಮುಖರಾದ ಮೇಲೆ ಬ್ಲಾಕ್ ಫಂಗಸ್ ಹಾಗೂ ವೈಟ್ ಫಂಗಸ್ ಸೋಂಕಿನ ಬಗ್ಗೆ ಚರ್ಚೆಗಳಾಗುತ್ತಿದ್ದು, ಈ ಬಗ್ಗೆ ಸೋಂಕನ್ನು ತಡೆಗಟ್ಟಲು ಪಾಲಿಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು.

10) **ಶ್ರೀ ಸಾಲೋಮನ್, ವೈದ್ಯಾಧಿಕಾರಿಗಳು ಮಾತನಾಡಿ,**

- ವಾರ್ಡ್ ವ್ಯಾಪ್ತಿಯಲ್ಲಿ ಸೋಂಕಿತ ಪ್ರಕರಣಗಳ ಸಂಖ್ಯೆಯನ್ನು ನಿಖರವಾಗಿ ಹೇಳುವುದು ಕಷ್ಟವಾಗುವುದಾಗಿ ಸಭೆಗೆ ತಿಳಿಸಿದರು.
- ವೆಂಟಿಲೇಟರ್ ಅವಶ್ಯಕತೆ ಇರುವ ಸೋಂಕಿತ ವ್ಯಕ್ತಿಗೆ ಸಾಮಾನ್ಯ ಬೆಡ್ ನೀಡಲು ಬರುವುದಿಲ್ಲವೆಂದು ಸಭೆಗೆ ತಿಳಿಸಿದರು.
- ಸೋಂಕಿತ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಪ್ರಸ್ತುತ ಲಭ್ಯವಿರುವ ಆರೋಗ್ಯ ಸಿಬ್ಬಂಧಿಗಳ ಕೊರತೆ ಹೆಚ್ಚಾಗಿರುತ್ತದೆ. ಹಾಲೀ ಇರುವ ಸಿಬ್ಬಂದಿಗಳಲ್ಲಿ ಸೇವೆ ನೀಡುವುದು ಕಷ್ಟಸಾಧ್ಯವಾಗಿರುವುದಾಗಿ ಸಭೆಗೆ ತಿಳಿಸಿದರು.
- ಕೊನೆಯದಾಗಿ :ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸಮಯದಲ್ಲಿ ದೂರವಾಣಿ ಮಾಡಿದರೂ ಸ್ಪಂಧಿಸುವುದಾಗಿ ಸಭೆಗೆ ತಿಳಿಸಿದರು.
- ಪ್ರತಿ ವಾರದಲ್ಲಿ ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿರುವ ಬೀದಿ ವ್ಯಾಪಾರಿಗಳನ್ನು ಸೋಮವಾರ, ಬುಧವಾರ ಮತ್ತು ಶನಿವಾರದಂದು ಎಲ್ಲಾ ಅಧಿಕಾರಿ ನೌಕರರು ಹಾಗೂ ಸ್ವಯಂ ಸೇವಕರುಗಳು ಪಾದಾಚಾರಿ ಮಾರ್ಗ ತೆರವುಕಾರ್ಯಾಚರಣೆ ಹಾಗೂ ಸಾರ್ವಜನಿಕರಲ್ಲಿ ಸೋಂಕಿನ ಬಗ್ಗೆ ಜನ ಜಾಗೃತಿ ಮೂಡಿಸಲು ಸಭೆಗೆ ತಿಳಿಸಿದರು.

11) ಕೊನೆಯದಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ಸದರಿಯವರಿಗೆ ಪರಿಚಯವಿದ್ದ ಸ್ವಯಂ ಸೇವಕರನ್ನು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕಳುಹಿಸಿಕೊಡುವುದಾಗಿ ತಿಳಿಸಲಾಗಿ, ಅದರಂತೆ ಈ ಕೆಳಕಂಡ ಸ್ವಯಂ ಸೇವಕರ ಹೆಸರು ಮತ್ತು ಪೋನ್ ನಂಬರ್‌ಗಳ ವಿವರಗಳು ಕೆಳಕಂಡಂತಿರುತ್ತದೆ.

| Sl No | Name | Address | Mobile No |
|---|---|---|---|
| 1 | D Raja | No.342/A, James Road, Near Kullappa Circle, Kammanahalli | 9902254914 |

| | | | |
|---|---|---|---|
| 2 | Ramesh D | No.342/A, James Road, Near Kullappa Circle, Kammanahalli | 9945758388 |
| 3 | Ajay Kumar D | No.342/A, James Road, near Kullappa Circle, Kammanahalli | 8892657076 |
| 4 | Arun P | No.59, ITC Colony, Near Purvankara Park Apartment, Cox Town, Bangalore | 9740199939 |
| 5 | Michael DSouza B | No.42, 3rd Cross, A Block, Janakiram Layout, Bangalore | 9632226941 |
| 6 | Sandhya S | No.63, PNS Layout, Subbanna Palya, Bangalore | 9902352720 |
| 7 | Baba Ai Khan | No.48, Hanumanthappa Road, RS Palya, Bangalore | 9900007171 |
| 8 | Kumar | No.122, 17th Cross, Janakiram Layout, Bangalore | 9538598531 |
| 9 | V Chandrashekar | No.5, Lakhsmaiah Layout, Subbanna Palya, Bangalore | 7899399605 |
| 10 | Srikanth J | No.56, Dr Rajkumar Road, Subbanna Palya, Bangalore | 9535542771 |
| 11 | Punith K | No.24, 1st Cross, Oil Mill Road, Bangalore | 9901219592 |
| 12 | Sridhara J | No.56, Dr Rajkumar Road, Subbanna Palya, Bangalore | 9986998809 |
| 13 | Rajendrababu N | No.30/1, Kodandarama Temple Road, Subbanna Palya, Bangalore | 9945442821 |
| 14 | Gireesha Yadava A.M | No.143, Krishnappa Layout, Subbanna Palya, Bangalore | 9141684169 |
| 15 | Navaneetha Murulidhar | No.654/2, C Muniswamappa Road, Bangalore | 7019281224 |
| 16 | Gnanashekar | No.51, 3rd Cross, J.V Shetty Road, RS Palya, Bangalore | 9880438191 |
| 17 | Mohan Babu K | No.16, Narayanappa building, Kammanahalli Main Road, RS Palya, Bangalore | 9535521559 |
| 18 | R Sharavanan | No.78, Ayyappa Street, RS Palya, Bangalore. | 9738699336 |
| 19 | C Suresh | 10th Cross, Sadashiva temple Road, RS Palya, Bangalore | 9845221499 |
| 20 | Murulidhar P | No.654/2, C Muniswamappa Road, RS Palya, Bangalore | 9880769655 |
| 21 | Ravichadran | 8th Cross,Sadashiva temple Road, RS Palya, Bangalore | 9008363456 |

| | | | |
|---|---|---|---|
| 22 | Manjunatha P | Kodandarama Temple Road, Subbayya Palya, Bangalore | 9448279292 |
| 23 | Vijay M | No.131, 2nd Cross, C Muniswamappa Road, RS Palya, Bangalore | 9972589743 |
| 24 | Prabhu | No.19, Dr Kuvempu Road, RS Palya, Bangalore | 9060440853 |
| 25 | Krishnamurthy | C Muniswamappa Road, RS Palya, Bangalore | 9606194729 |
| 26 | Vijay Raju | Janakiram Layout, A Block, Bangalore | 9341258517 |
| 27 | Rajendran C | Kammanahalli Cross Road, Kammanahalli | 9886536901 |
| 28 | Gopala Reddy | C Muniswamappa Road, RS Palya, Bangalore | 9449330301 |
| 29 | Jerard D Souza | No.504, 7th Cross, ITC Road, near Jayalakshmi School, Kammanahalli | 9902172558 |
| 30 | Venkatesh | Sangolli Rayanna Road, PNS Layout, Bangalore | 9902261882 |
| 31 | Riyaz | 7th Main, SB Palya, Bangalore | 9901710093 |
| 32 | Muniraju K | Annaiah Road, RS Palya, Bangalore | 8123505994 |
| 33 | Krishna | Munegowda Road, RS Palya, Bangalore | 9880695285 |
| 34 | Manjunatha K.C | No.31, Harsha Layout, SB Palya, Bangalore | 9845917035 |
| 35 | Kiran | No.21/1, Ramaiah Road, RS Palya, Bangalore | 9945155524 |
| 36 | Daya | 4th Cross, Sadashiva temple Road, Bangalore | 8088473068 |
| 37 | Arun Kumar | Veerabhadrappa Road, 4th Cross, RS Palya, Bangalore | 9886814217 |
| 38 | Manikantan | ITC Road, RS Palya, Bangalore | 9742448948 |
| 39 | Gunashekar | ITC Road, RS Palya, Bangalore | 9620200730 |
| 40 | Captain Subramani | Seethamma Road, RS Palya, Bangalore | 9844041469 |
| 41 | Devi Reddy | Annayyappa Road, RS Palya, Bangalore | 9620764009 |
| 42 | Anthony Suresh | Veerabhadrappa Road, RS Palya, Bangalore | 7892110347 |
| 43 | Bala Subramani | Veerabhadrappa Road,. AK Colony, RS Palya, Bangalore | 9845773753 |

| | | | |
|---|---|---|---|
| 44 | Sai Ram G | Ramesh Kumar Road, Oil Mill Road, Bangalore | 9731203838 |
| 45 | B Prabhu | 5th Main Road, Kullappa Circle, Bangalore | 7411242185 |

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 28 ಕಮ್ಮನಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ.28, ಕಮ್ಮನಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಧಿಕಾರಿಗಳ ಮಾಹಿತಿಗಾಗಿ

1) ಮಾನ್ಯ ಜಂಟಿ ಆಯುಕ್ತರು (ಪೂರ್ವ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2) ಮುಖ್ಯ ಅಭಿಯಂತರರು (ಪೂರ್ವ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಉಪ ನಿಯಂತ್ರಕರು (ಹಣಕಾಸು) ಪೂರ್ವ ರವರ ಮಾಹಿತಿಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಮಾರುತಿಸೇವಾನಗರ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಪೋಲೀಸ್ ಇನ್ಸ್‌ಪೆಕ್ಟರ್ ಬಾಣಸವಾಡಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಕಳುಹಿಸಿದೆ
7) ಪೋಲೀಸ್ ಸಬ್ ಇನ್ಸ್‌ಪೆಕ್ಟರ್ (ಸಂಚಾರಿ) ಬಾಣಸವಾಡಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಕಳುಹಿಸಿದೆ
8) ಕಛೇರಿ ಪ್ರತಿ.